ಶ್ರೀ ಡಿ. ಕೆ. ನಾಯ್ಕರ್.—ಈಗಾಗಲೇ ನಾಲ್ಕು ಬೋರ್‌ವೆಲ್‌ಗಳನ್ನು ಹಾಕಿ ನೀರನ್ನು ಒದಗಿಸಲಾಗುತ್ತಿದೆ. ಹೀಗಿರುವಾಗ ನೀರನ್ನು ಕೊಟ್ಟಿಲ್ಲ ಎಂದು ಹೇಳುವುದು ಸರಿಯಲ್ಲ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಬೋರ್‌ವೆಲ್‌ಗಳನ್ನು ಹಾಕಿದ್ದು ಕ್ಷಾಮ ಬಂದಾಗ. ಅದು ಎನ್. ಆರ್. ಡಬ್ಲ್ಯೂ ಯೋಜನೆಗೆ ಅನ್ವಯವಾಗುವುದಿಲ್ಲ. ಆದ್ದರಿಂದ ಬೇಗನೆ ಎನ್.ಆರ್. ಡಬ್ಲ್ಯೂ ಯೋಜನೆಯನ್ನು ಪೂರ್ತಿ ಮಾಡಿ ಬೇಗನೆ ಜನಗಳಿಗೆ ನೀರು ಸಿಕ್ಕುವಂತೆ ಮಾಡುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.—1975ನೇ ಇಸವಿ ಮಾರ್ಚ್ ತಿಂಗಳಲ್ಲಿ ಆ ಯೋಜನೆಯನ್ನು ಮುಗಿಸುತ್ತೇವೆ ಎಂದು ಚೀಫ್ ಇಂಜಿನಿಯರ್ ಹೇಳಿದ್ದಾರೆ. ಜನಗಳಿಗೆ ತೊಂದರೆಯಾಗಬಾರದು ಎಂದು ಬೋರ್‌ವೆಲ್ ಹಾಕಿ ಈಗ ಜನಗಳಿಗೆ ನೀರನ್ನು ಕೊಡರಾಗುತ್ತಿದೆ.

Chief Officers of Municipal Councils

47. Sri V. M. GHADI (Haliyal).—

Will the Minister for Law and Municipal Administration be pleased to state:—

(*a*) the number of Town Panchayats and Village Panchayats that have been converted into Town Municipal Councils ;

(*b*) whether regular Chief Officers are working in all these Municipal Councils ;

(*c*) if not, the reasons for the same and when these Officers will be appointed especially in North Kanara District ?

Sri D. K. NAIKAR (Minister for Law and Municipal Administration).—

(*a*) 54.

(*b*) No.

(*c*) Pending filling up posts of Chief Officers by regular Chief Officers the Government have directed the Divisional Commissioners to continue the Secretaries of the Town Panchayats or Village Panchayats as Chief Officers and where there are no Secretaries, appointments may be made by drafting the officials from the Revenue Department on temporary basis. This holds good even for North-Kanara District.

ಶ್ರೀ ವಿ. ಎಂ. ಘಾಡಿ.—54 ಟೌನ್ ಪಂಚಾಯಿತಿಗಳು ಹಾಗೂ ಗ್ರಾಮ ಪಂಚಾಯಿತಿಗಳನ್ನು ಟೌನ್ ಪುರಸಭಾ ಮಂಡಲಗಳಾಗಿ ಪರಿವರ್ತಿಸಲಾಗಿದೆಯೆಂದು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಹೇಳಿದೆ. ಅವುಗಳಿಗೆ ಇನ್ನೂ ರೆಗ್ಯುಲರ್ ಚೀಫ್ ಆಫೀಸರುಗಳನ್ನು ನೇಮಕಮಾಡಿಲ್ಲ. ಕಾರಣ ಕೇಳಿದರೆ, ಮೊದಲಿದ್ದ ಕಾರ್ಯದರ್ಶಿಗಳೇ ಅಲ್ಲಿ ಮುಂದುವರಿಸಿದ್ದೇವೆಂದು ಹೇಳುತ್ತಾರೆ. ಅಂತಹ ಕಾರ್ಯದರ್ಶಿಗಳಿಂದ ಸುಗಮವಾಗಿ ಹಾಗೂ ಉತ್ತಮವಾಗಿ ಕೆಲಸಕಾರ್ಯಗಳು ನಡೆಯುವುದಿಲ್ಲವೆಂದು ನನ್ನ ಅಭಿಪ್ರಾಯ. ಅದಕ್ಕೆ ತಮ್ಮ ಉತ್ತರವೇನು ?

† ಶ್ರೀ ಡಿ. ಕೆ. ನಾಯ್ಕರ್.—ಕನ್‌ವರ್ಟೆಡ್ ಪಂಚಾಯಿತಿಗಳಲ್ಲಿ ಯಾವ ಕಾರ್ಯದರ್ಶಿಗಳು ಇದ್ದಾರೆಯೋ ಅವರನ್ನೇ ಮುಂದುವರಿಸಿದ್ದೇವೆ. ಎಲ್ಲಿ ಕಾರ್ಯದರ್ಶಿಗಳಿಲ್ಲವೋ ಅಂತಹ ಕಡೆಗಳಲ್ಲಿ ಚೀಫ್ ಆಫೀಸರನ್ನು ಡೆಪ್ಯುಟೇಷನ್ ಮೇಲೆ ಕೊಡಬೇಕೆಂಬ ಆಜ್ಞೆಯನ್ನು ಡಿವಿಷನರ್ ಕಮಿಷನರ್ ಅವರಿಗೆ ಕೊಟ್ಟಿದ್ದೇವೆ.

ಶ್ರೀ ವಿ. ಎಂ. ಘಾಡಿ.—ಅಲ್ಲಿನ ಕೆಲಸಕಾರ್ಯಗಳು ಉತ್ತಮ ರೀತಿಯಲ್ಲಿ ನಡೆಯುತ್ತಿಲ್ಲ ಅದನ್ನು ಮಂತ್ರಿಗಳು ಹೋಗಿ ನೋಡಿ ಅವರನ್ನು ಕೂಡಲೇ ಟ್ರಾನ್ಸ್‌ಫರ್ ಮಾಡಿ ಎಂಬುದಾಗಿ ಹೇಳಿ ಅಬ್‌ಜಕ್ಷನ್ ತೆಗೆದುಕೊಂಡಿದ್ದರೂ ಇನ್ನೂ ಅಲ್ಲಿಗೆ ರೆಗ್ಯುಲರ್ ಚೀಫ್ ಆಫೀಸರನ್ನು ಏಕೆ ನೇಮಕ ಮಾಡಲಿಲ್ಲ.

ಶ್ರೀ ಡಿ.ಕೆ. ನಾಯ್ಕರ್.—ಅವರನ್ನು ಅಲ್ಲಿಗೆ ಹಾಕುವ ಬಗ್ಗೆ ನಮಗೆ ಡಿವಿಷನಲ್ ಕಮಿಷನರ್ ಅವರಿಂದ ಉತ್ತರ ಬಂದಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ರಾಜ್ಯದ ಕೆಲವು ಮುನಿಸಿಪಾಲಿಟಿಗಳಲ್ಲಿ ಉದಾಹರಣೆಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಒಬ್ಬ ಸೆಕೆಂಡ್ ಡಿವಿಷನ್ ಕ್ಲರ್ಕನ್ನು ಚೀಫ್ ಆಫೀಸರಾಗಿ ನೇಮಕ ಮಾಡಿ ಅವರು ಅಲ್ಲಿ ಕೆಲಸ ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಕೆ. ನಾಯ್ಕರ್.—ನಮ್ಮಲ್ಲಿ ಚೀಫ್ ಆಫೀಸರಾಗಿ ನೇಮಕವಾಗಲು ಹೆಚ್ಚು ಹ್ಯಾಂಡ್ಸ್ ಇಲ್ಲದೇ ಇರುವುದರಿಂದ ಕಂದಾಯ ಇರಾಖೆಯಲ್ಲಿನ ಫರ್ಸ್ಟ್ ಅಂಡ್ ಸೆಕೆಂಡ್ ಡಿವಿಷನ್ ಕ್ಲರ್ಕ್‌ಗಳನ್ನು ಅಲ್ಲಿಗೆ ಅಂತಹ ಸಂದರ್ಭಗಳಲ್ಲಿ ಹಾಕಬೇಕೆಂದು ಡಿವಿಷನರ್ ಕಮಿಷನರ್ ಅವರಿಗೆ ನಿರ್ದೇಶನವನ್ನು ಕೊಟ್ಟಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಅನೇಕ ವಿಲೇಜ್ ಪಂಚಾಯ್ತಿಗಳಲ್ಲಿ ಹಾಗೂ ಟೌನ್ ಪಂಚಾಯ್ತಿಗಳಲ್ಲಿ ಮುಖ್ಯಾಧಿಕಾರಿಗಳ ಹುದ್ದೆಗಳನ್ನು ಇಲ್ಲಿಯವರೆಗೂ ಇನ್ನೂ ಭರ್ತಿ ಮಾಡಲಿಲ್ಲ. ಇದು ಕೇವಲ ತಮಗೆ ಬೇಕಾದವರನ್ನು ನೇಮಿಸಬೇಕೆಂಬ ಉದ್ದೇಶದಿಂದ ಇಲ್ಲಿಯವರೆಗೂ ಯಾವ ವಿಲೇಜ್ ಪಂಚಾಯ್ತಿಗಳಿಗೂ ಮತ್ತು ಟೌನ್ ಪಂಚಾಯ್ತಿಗಳಿಗೂ ಅಂತಹವರನ್ನು ನೇಮಿಸದೆ ಇರುವುದು ನಿಜವೇ ?

ಶ್ರೀ ಡಿ. ಕೆ. ನಾಯ್ಕರ್.—ಅದು ಸತ್ಯಕ್ಕೆ ದೂರವಾದ ಮಾತು. ಎಲ್ಲಿ ಹ್ಯಾಂಡ್ಸ್ ಇಲ್ಲ ಅಲ್ಲಿ ನಾವು ಕೊಟ್ಟಿಲ್ಲ.

ಶ್ರೀ ವಿ. ಎಂ. ಘಾಡಿ.—ರೆಗ್ಯುಲರ್ ಚೀಫ್ ಆಫೀಸರುಗಳನ್ನು ಅಲ್ಲಿಗೆ ನೇಮಕಮಾಡದೇ ಇರುವುದರಿಂದ ಮುನಿಸಿಪಾಲಿಟಿಗಳಲ್ಲಿ ಚೆನ್ನಾಗಿ ಕೆಲಸ ಕಾರ್ಯಗಳು ಆಗುತ್ತಿಲ್ಲ. ಅನೇಕ ಮುನಿಸಿಪಾಲಿಟಿಗಳಲ್ಲಿ ಅವರಿಗೆ ಬಡ್‌ಜೆಟ್ ತಯಾರುಮಾಡುವುದಕ್ಕೂ ಬರುವುದಿಲ್ಲ. ಆದ್ದರಿಂದ ಈಗಲಾದರೂ ಕೂಡಲೇ ರೆಗ್ಯುಲರ್ ಚೀಫ್ ಆಫೀಸರುಗಳನ್ನು ಅಲ್ಲಿಗೆ ನೇಮಕಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಅಲ್ಲಿಗೆ ರೆಗ್ಯುಲರ್ ಚೀಫ್ ಆಫೀಸರುಗಳ ನೇಮಕದ ಬಗ್ಗೆ ಈಗಾಗಲೇ ಡಿವಿಷನಲ್ ಕಮಿಷನರ್ ಕ್ರಮ ತೆಗೆದುಕೊಂಡಿದ್ದಾರೆ.

Sri B. B. SAYANAK.—When the Government wants to convert the village Panchayats in to the Municipalities, is it not the duty of the Government to take precautions to appoint Chief Officers early ?

Sri D. K. NAIKAR.—The Government as already taken precautions. Wherever there are Secretaries in the Panchayats, they are continued as Chief Officers after the conversion and wherever there are no Secretaries, the Government has made arrangement to appoint Chief Officers on deputation.

Taking over of powers of Excise Flying Squad

87. **Sri R. PEERANNA** (Heggadadevanakote),

Sri B. BHASKAR SHETTY (Kaup) and

Sri M. H. JAYAPRAKASH NARAYAN (Sirsi).—

Will the Minister for Excise and Labour be pleased to state —

(*a*) the reason for the issue of the Circular No. EXE. CRM. I. 120/74–75 dated 11th October 1974 by Excise Commissioner to take